# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 550 |
| ಮಾನ್ಯ ಸದಸ್ಯರ ಹೆಸರು | ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 16-12-2021 |
| ಉತ್ತರಿಸಬೇಕಾದವರು | ಅಬಕಾರಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಅಬಕಾರಿ ಇಲಾಖೆಯಿಂದ ಮದ್ಯ ಮಾರಾಟಕ್ಕಾಗಿ ಎಷ್ಟು ವಿಧದ ಪರವಾನಗಿಯನ್ನು ನೀಡಲಾಗುತ್ತದೆ; ಮತ್ತು ಅವುಗಳಿಗೆ ಇರುವ ಮಾನದಂಡಗಳೇನು; | ಅಬಕಾರಿ ಇಲಾಖೆಯಲ್ಲಿ ಮದ್ಯ ಮಾರಾಟಕ್ಕೆ ಕೆಳಕಂಡ ವಿವಿಧ ರೀತಿಯ ಪರವಾನಗಿಗಳನ್ನು ನೀಡಲಾಗುತ್ತಿದೆ: |

| ಕ್ರ.ಸಂ | ಸನ್ನದು | ವಿವರ |
|---|---|---|
| 1 | ಸಿಎಲ್-2 | ಸೀಲ್ಡ್ ಬಾಟಲ್ ಗಳಲ್ಲಿ ಮಾತ್ರ ಚಿಲ್ಲರೆ ಮದ್ಯ ಮಾರಾಟಕ್ಕಾಗಿ |
| 2 | ಸಿಎಲ್-4 | ಕ್ಲಬ್‌ಗಳಿಗೆ |
| 3 | ಸಿಎಲ್-6(ಎ) | ಸ್ಟಾರ್ ಹೋಟೆಲ್‌ಗಳಿಗೆ |
| 4 | ಸಿಎಲ್-7 | ಹೋಟೆಲ್ ಮತ್ತು ವಸತಿ ಗೃಹಗಳನ್ನು ಹೊಂದಿದವರಿಗೆ |
| 5 | ಸಿಎಲ್-7ಎ | ಟೂರಿಸ್ಟ್ ಹೋಟೆಲ್ ಸನ್ನದು |
| 6 | ಸಿಎಲ್-7ಬಿ | ಟೂರಿಸ್ಟ್ ಹೋಟೆಲ್ ಬೀರ್ ಬಾರ್ ಸನ್ನದು |
| 7 | ಸಿಎಲ್-7ಸಿ | ಚಲಿಸುವ ರೈಲಿಗೆ ಕೆ.ಎಸ್.ಟಿ.ಡಿ.ಸಿ / ಐ.ಟಿ.ಡಿ.ಸಿ ಇಲಾಖೆಯಿಂದ ನಡೆಸುವ ಸಲುವಾಗಿ ನೀಡುವ ಸನ್ನದು |
| 8 | ಸಿಎಲ್-8 | ಮಿಲಿಟರಿ ಕ್ಯಾಂಟಿನ್ |
| 9 | ಸಿಎಲ್-8ಎ | ಮಿಲಿಟರಿ ಕ್ಯಾಂಟಿನ್ ಸ್ಟೋರ್ಸ್ ಬಾಂಡೆಡ್ ವೇರ್ ಹೌಸ್ ಸನ್ನದು |
| 10 | ಸಿಎಲ್-8ಬಿ | ಬಿ.ಎಸ್.ಎಫ್ ಮತ್ತು ಪ್ಯಾರಾ ಮಿಲಿಟರಿ ಫೋರ್ಸ್ ಸನ್ನದುಗಳು |
| 11 | ಸಿಎಲ್-9 | ರೀಫ್ರೇಶ್ ಮೆಂಟ್ ರೂಮ್ (ಬಾರ್) ಸನ್ನದು |
| 12 | ಸಿಎಲ್-11-ಸಿ | (ಎಂಎಸ್ಐಎಲ್) |
| 13 | ಸಿಎಲ್-14 in ಫಾರ್ಮ್ ಸಿಎಲ್-16 | (ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿನ ಡ್ಯೂಟಿ ಫ್ರೀ ಮದ್ಯದಂಗಡಿ) |
| 14 | ಸಿಎಲ್-15ಎ in ಫಾರ್ಮ್ ಸಿಎಲ್-17 | (ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿನ ಸ್ಥಳೀಯ ಮತ್ತು ಅಂತರರಾಷ್ಟ್ರೀಯ ವಿಮಾನ ಪ್ರಯಾಣಿಕರಿಗೆ ರೀಫ್ರೇಶ್ ಮೆಂಟ್ ರೂಮ್ (ಬಾರ್) ಸನ್ನದು) |

| | | |
|---|---|---|
| 15 | ಸಿಎಲ್-15ಬಿ in ಫಾರ್ಮ್ ಸಿಎಲ್-18 | (ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿನ ಅಂತರರಾಷ್ಟ್ರೀಯ ವಿಮಾನ ಪ್ರಯಾಣಿಕರಿಗೆ ರೀಫ್ರೆಶ್ ಮೆಂಟ್ ರೂಮ್ (ಬಾರ್) ಸನ್ನದು) |

1992ನೇ ಸಾಲಿನಿಂದ ಹೊಸದಾಗಿ ಸಿಎಲ್-2 ಮತ್ತು ಸಿಎಲ್-9 ಸನ್ನದನ್ನು ನೀಡಲು ನಿರ್ಬಂಧವಿರುವುದರಿಂದ ಅಬಕಾರಿ ಇಲಾಖೆಯಿಂದ ಯಾವುದೇ ಹೊಸ ಸಿಎಲ್-2 ಮತ್ತು ಸಿಎಲ್-9 ಸನ್ನದಿಗೆ ಮಂಜೂರಾತಿ ನೀಡಲಾಗುತ್ತಿಲ್ಲ.

ರಾಜ್ಯದಲ್ಲಿ ಸಿಎಲ್-2, ಸಿಎಲ್-4, ಸಿಎಲ್-6ಎ, ಸಿಎಲ್-7, ಸಿಎಲ್-9, ಸಿಎಲ್-11ಸಿ, ಆರ್ ವಿ ಬಿ ಮತ್ತು ಇತರೆ ಪರವಾನಗಿಗಳನ್ನು ನೀಡುವಾಗ ಈ ಕೆಳಕಂಡ ನಿಯಮಗಳನ್ನು ಪಾಲಿಸಿ ನೀಡಲಾಗುತ್ತಿದೆ:

1) **ಸಿಎಲ್-2, ಸಿಎಲ್-4, ಸಿಎಲ್-6ಎ, ಸಿಎಲ್-7, ಸಿಎಲ್-8, ಸಿಎಲ್-9 ಸನ್ನದುಗಳು:** ಕರ್ನಾಟಕ ಅಬಕಾರಿ (ದೇಶಿ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು 1968 ರಡಿಯಲ್ಲಿನ ನಿಯಮಗಳಲ್ಲಿ ಅಗತ್ಯವಾಗಿ ಕಲ್ಪಿಸಬೇಕಾಗಿರುವ ಮೂಲಭೂತ ಸೌಲಭ್ಯಗಳು ಮತ್ತು ನಿಯಮಗಳಲ್ಲಿನ ನಿರ್ಬಂಧಗಳು.

2) **ಸಿಎಲ್-4, ಸಿಎಲ್-6ಎ, ಸಿಎಲ್-7, ಸಿಎಲ್-9 ಸನ್ನದುಗಳಿಗೆ ಹೊಂದಿಕೊಂಡಿರುವ ಆರ್‌ವಿಬಿ ಸನ್ನದುಗಳು:** ಕರ್ನಾಟಕ ಅಬಕಾರಿ ಕಾಯಿದೆ 1965 ಮತ್ತು ಅದರಡಿ ರೂಪಿತವಾಗಿರುವ ಕರ್ನಾಟಕ ಅಬಕಾರಿ (ಚಿಲ್ಲರೆಯಾಗಿ ಬೀಯರ್‌ನ್ನು ಮಾರಾಟ ಮಾಡುವ ಗುತ್ತಿಗೆ) ನಿಯಮ 1976 ರಡಿಯಲ್ಲಿನ ನಿಯಮಗಳು ಮತ್ತು ಕರ್ನಾಟಕ ಅಬಕಾರಿ ಸನ್ನದುಗಳ ಅಗತ್ಯವಾಗಿ ಕಲ್ಪಿಸಬೇಕಾಗಿರುವ ಮೂಲಭೂತ ಸೌಲಭ್ಯಗಳು.

3) **ಮೈಕ್ರೋಬ್ರಿವರಿ ಸನ್ನದುಗಳು:** ಕರ್ನಾಟಕ ಅಬಕಾರಿ ಕಾಯಿದೆ 1965 ಮತ್ತು ಅದರಡಿ ರೂಪಿತವಾಗಿರುವ ಕರ್ನಾಟಕ ಅಬಕಾರಿ (ಬ್ರೀವರಿ) (ತಿದ್ದುಪಡಿ) ನಿಯಮಗಳು 2010 ರಡಿಯಲ್ಲಿ ರೂಪಿತವಾಗಿರುವ ನಿಯಮಗಳು.

4) ವೈನ್ ಟಾವರಿನ್/ವೈನ್ ಬೋಟಿಕ್ ಸನ್ನದುಗಳು ಕರ್ನಾಟಕ ಅಬಕಾರಿ ಕಾಯಿದೆ 1965 ಮತ್ತು ಅದರಡಿ ರೂಪಿತವಾಗಿರುವ ಕರ್ನಾಟಕ ಅಬಕಾರಿ (ಚಿಲ್ಲರೆಯಾಗಿ ವೈನನ್ನು ಮಾರಾಟ ಮಾಡುವ ಹಕ್ಕು) ನಿಯಮಗಳು 2008 ರಡಿಯಲ್ಲಿನ ನಿಯಮಗಳು.

ಈ ಮೇಲಿನ ಎಲ್ಲಾ ಸನ್ನದುಗಳು ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು 1967 ರಲ್ಲಿನ ನಿಯಮಗಳಡಿ ರೂಪಿಸಿರುವ ನಿರ್ಬಂಧಗಳನ್ನು ಪಾಲಿಸಬೇಕಾಗುತ್ತದೆ.

ಮುಂದುವರೆದು, ಈ ಎಲ್ಲಾ ಸನ್ನದುಗಳನ್ನು ಮಂಜೂರು ಮಾಡುವಾಗ

ಅರ್ಜಿದಾರರುಗಳು ಕರ್ನಾಟಕ ಅಬಕಾರಿ (ದೇಶಿ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು, 1968ರ ನಿಯಮ 4(ಬಿ) ಪ್ರಕಾರ ಮತ್ತು ಕರ್ನಾಟಕ ಅಬಕಾರಿ (ಬ್ರಿವರಿ) ನಿಯಮಗಳು 1967ರ ನಿಯಮ 5(ಬಿ) ರನ್ವಯ ಅನರ್ಹರಾಗದಿರುವ ಬಗ್ಗೆ ಸ್ವಯಂಘೋಷಿತ ಮುಚ್ಚಳಿಕೆಯನ್ನು ಪಡೆಯಲಾಗುತ್ತಿರುತ್ತದೆ.

ರಾಜ್ಯದಲ್ಲಿ ಎಂ.ಎಸ್.ಐ.ಎಲ್ ಸನ್ನದುಗಳನ್ನು ಮಂಜೂರು ಮಾಡಲು ಸರ್ಕಾರ ಅನುಸರಿಸುವ ಮಾರ್ಗಸೂಚಿಗಳು ಕೆಳಕಂಡಂತಿವೆ:

ಎಂ.ಎಸ್.ಐ.ಎಲ್ ಮಳಿಗೆಗಳನ್ನು ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968 ರ ನಿಯಮ-3(11-ಸಿ), 8, 8(ಎ) ಹಾಗೂ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ-5ರ ಪ್ರಕಾರ ನಿಬಂಧನೆಗಳನ್ನು ಪಾಲಿಸಿ ಮಂಜೂರು ಮಾಡಲು ಪೂರ್ವಾನುಮತಿ ನೀಡಲಾಗುವುದು.

ಸರ್ಕಾರದ ಪತ್ರ ಸಂಖ್ಯೆ: ಎಫ್‌ಡಿ 07 ಇಎಫ್‌ಎಲ್ 2008 ದಿನಾಂಕ: 03.07.2009 ರಲ್ಲಿ ಪ್ರತಿ ತಾಲ್ಲೂಕಿಗೆ ಕನಿಷ್ಟ 2 ರಂತೆ 352 ಸನ್ನದುಗಳು, ಜಿಲ್ಲಾ ಕೇಂದ್ರಸ್ಥಾನಕ್ಕೆ 2 ರಂತೆ 58 ಸನ್ನದುಗಳು ಹಾಗೂ ಎಂಎಸ್‌ಐಎಲ್ ಸಂಸ್ಥೆ ಪ್ರಾದೇಶಿಕ ಬೇಡಿಕೆ ಅಧ್ಯಯನ ಆಧರಿಸಿ ಕೋರಿಕೆ ಸಲ್ಲಿಸುವ ಸ್ಥಳಗಳಿಗೆ 53 ಸನ್ನದುಗಳಂತೆ ಒಟ್ಟು 463 ಸನ್ನದುಗಳನ್ನು ಹಂಚಿಕೆ ಮಾಡಲಾಗಿದೆ.

ಮುಂದುವರೆದು, ಸರ್ಕಾರದ ಪತ್ರ ಸಂಖ್ಯೆ: ಎಫ್‌ಡಿ 15 ಇಎಫ್‌ಎಲ್ 2015 ದಿ:23.09.2016 ರಲ್ಲಿ ಕೆಳಕಂಡ ಷರತ್ತುಗಳ ಮೇಲೆ ಎಂ.ಎಸ್.ಐ.ಎಲ್ ಸಂಸ್ಥೆಗೆ ಒಟ್ಟು 900 ಸನ್ನದುಗಳನ್ನು ಹೆಚ್ಚುವರಿಯಾಗಿ ಮಂಜೂರು ಮಾಡಲು ಅನುಮೋದನೆ ನೀಡಲಾಗಿದೆ.

i. ಎಂ.ಎಸ್.ಐ.ಎಲ್ ಸಂಸ್ಥೆಯೇ ತನ್ನ ವಾಣಿಜ್ಯ ಕಾರ್ಯಸಾಧ್ಯತೆಗೆ ಅನುಗುಣವಾಗಿ ಸನ್ನದುಗಳ ಸ್ಥಳವನ್ನು ನಿಗಧಿಗೊಳಿಸುವುದು. ಎಂ.ಎಸ್.ಐ.ಎಲ್ ಸಂಸ್ಥೆಯ ಅಧಿಕಾರಿಗಳು ಕರ್ನಾಟಕ ಅಬಕಾರಿ ಕಾಯ್ದೆಯನ್ವಯ ಮದ್ಯದಂಗಡಿಗಳನ್ನು ತೆರೆಯುವ ನಿರ್ದಿಷ್ಟ ಸ್ಥಳಗಳನ್ನು ಗುರುತಿಸುವುದು.

ii. ಈ ರೀತಿ ಗುರುತಿಸುವ ಸ್ಥಳಗಳು ಸರ್ಕಾರವು ತಿಳಿಸಿರುವ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲೇ ಇರಬೇಕು ಹಾಗೂ ನಿಗದಿಪಡಿಸಿರುವ ಸಂಖ್ಯೆಯ ಮಿತಿಯಲ್ಲೇ ಇರಬೇಕು.

iii. ಒಂದು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಿಂದ ಮತ್ತೊಂದು ವಿಧಾನಸಭಾ ಕ್ಷೇತ ವ್ಯಾಪ್ತಿಗೆ ವರ್ಗಾವಣೆ ಆಗದಂತೆ ನೋಡಿಕೊಳ್ಳತಕ್ಕದ್ದು.

iv. ಎಂ.ಎಸ್.ಐ.ಎಲ್ ಸಂಸ್ಥೆಯಿಂದ ಸನ್ನದು ಸ್ಥಳಗಳನ್ನು ಗುರುತಿಸಿ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ ನಂತರ ಅಂತಹ ಸನ್ನದು ಸ್ಥಳಗಳು ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5 ರನ್ವಯ ಆಕ್ಷೇಪಣಾ ರಹಿತ ಸ್ಥಳದಲ್ಲಿರುವಂತೆ ಹಾಗೂ ಇತರೆ ಸಂಬಂಧಿಸಿದ ನಿಯಮಗಳಿಗೆ ಪೂರಕವಾಗಿರುವಂತೆ ಸಂಬಂಧಪಟ್ಟ ಅಬಕಾರಿ ಉಪ ಆಯುಕ್ತರು ನೋಡಿಕೊಳ್ಳುವುದು.

ಮುಂದುವರೆದು, ಸರ್ಕಾರದ ಪತ್ರ ಸಂಖ್ಯೆ: ಎಫ್‌ಡಿ 08 ಇಎಫ್‌ಎಲ್ 2020 ದಿ:08.09.2020ರಲ್ಲಿ ಈಗಾಗಲೇ ಮಂಜೂರು ಮಾಡಿರುವ ಒಟ್ಟು 900 ಸನ್ನದುಗಳ ಪೈಕಿ ಬಾಕಿ ಉಳಿದಿರುವ 441 ಸನ್ನದುಗಳನ್ನು ಕೆಳಕಂಡ ಷರತ್ತುಗಳ ಮೇಲೆ ಪ್ರಾರಂಭಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ.

1. ಎಂ.ಎಸ್.ಐ.ಎಲ್ ಸಂಸ್ಥೆಯೇ ತನ್ನ ವಾಣಿಜ್ಯ ಕಾರ್ಯಸಾಧ್ಯತೆಗೆ ಅನುಗುಣವಾಗಿ ಸನ್ನದುಗಳ ಸ್ಥಳವನ್ನು ನಿಗಧಿಗೊಳಿಸುವುದು. ಎಂ.ಎಸ್.ಐ.ಎಲ್ ಸಂಸ್ಥೆಯ ಅಧಿಕಾರಿಗಳು ಕರ್ನಾಟಕ ಅಬಕಾರಿ ಕಾಯ್ದೆಯನ್ವಯ ಮದ್ಯದಂಗಡಿಗಳನ್ನು ತೆರೆಯುವ ನಿರ್ದಿಷ್ಟ ಸ್ಥಳಗಳನ್ನು ಗುರುತಿಸುವುದು.

2. ಸಿಎಲ್-11(ಸಿ) ಕೋಟಾದಲ್ಲಿನ ಬಾಕಿ ಇರುವ 441 ಚಿಲ್ಲರೆ ಮದ್ಯ ಮಾರಾಟ ಸನ್ನದುಗಳ ಪೈಕಿ ಯಾವುದಾದರೂ ಸನ್ನದನ್ನು ಒಂದು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಿಂದ ಮತ್ತೊಂದು ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ವರ್ಗಾವಣೆ ಮಾಡುವುದಾದಲ್ಲಿ ಅದೇ ಜಿಲ್ಲೆಯ ಬೇರೆ ಯಾವುದಾದರೂ ಅಗತ್ಯವಿರುವ ವಿಧಾನಸಭಾ ಕ್ಷೇತ್ರಕ್ಕೆ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5 ರನ್ವಯ ಆಕ್ಷೇಪಣಾ ರಹಿತ ಸ್ಥಳಕ್ಕೆ ದಿನಾಂಕ:31.12.2020 ರೊಳಗೆ ವರ್ಗಾವಣೆ ಮಾಡಿಕೊಳ್ಳತಕ್ಕದ್ದು.

3. ಎಂ.ಎಸ್.ಐ.ಎಲ್ ಸಂಸ್ಥೆಯಿಂದ ಸನ್ನದು ಸ್ಥಳಗಳನ್ನು ಗುರುತಿಸಿ ಅಬಕಾರಿ ಇಲಾಖೆಗೆ ಸಲ್ಲಿಸಿದ ನಂತರ ಅಂತಹ ಸನ್ನದು ಸ್ಥಳಗಳು ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5 ರನ್ವಯ ಆಕ್ಷೇಪಣಾ ರಹಿತ ಸ್ಥಳದಲ್ಲಿರುವಂತೆ ಹಾಗೂ ಇತರೆ ಸಂಬಂಧಿಸಿದ ನಿಯಮಗಳಿಗೆ ಪೂರಕವಾಗಿರುವಂತೆ ಸಂಬಂಧಪಟ್ಟ ಅಬಕಾರಿ ಉಪ ಆಯುಕ್ತರು ನೋಡಿಕೊಳ್ಳತಕ್ಕದ್ದು.

ಸರ್ಕಾರದ ಸುತ್ತೋಲೆ ಸಂಖ್ಯೆ: ಎಫ್‌ಡಿ 65 ಇಡಬ್ಲ್ಯೂಪಿ 2020, ದಿನಾಂಕ: 09-10-2020 ರನ್ವಯ ವಿಧಿಸಿರುವ ಈ ಕೆಳಕಂಡ ಷರತ್ತುಗಳನ್ನು ದೃಢೀಕರಿಸಿಯೇ ಪ್ರಸ್ತಾವನೆಗಳನ್ನು ಸಲ್ಲಿಸಬೇಕಾಗಿ ಸರ್ಕಾರವು ಸೂಚಿಸಿರುತ್ತದೆ.

| | | |
|---|---|---|
| | | 1. ಎಂ.ಎಸ್.ಐ.ಎಲ್ ಸಂಸ್ಥೆಯು ಸಿಎಲ್-11 ಸಿ ಸನ್ನದಿಗಾಗಿ ಅರ್ಜಿಯನ್ನು ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು 1967 ರ ನಿಯಮ 2 ರನ್ವಯ ಮತ್ತು ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು, 1968 ರ ನಿಯಮ 4(1)(ಬಿ) ರ ನಮೂನೆ ಸಿಎಲ್-1ಎ ರಲ್ಲಿಯೇ ಸಲ್ಲಿಸತಕ್ಕದ್ದು.<br><br>2. ಎಂ.ಎಸ್.ಐ.ಎಲ್ ಸಂಸ್ಥೆಯ ವತಿಯಿಂದ ಸಿಎಲ್-11 ಸಿ ಸನ್ನದಿಗಾಗಿ ಅರ್ಜಿ ಸಲ್ಲಿಸುವ ವ್ಯಕ್ತಿಯು ಎಂ.ಎಸ್.ಐ.ಎಲ್ ಸಂಸ್ಥೆಯ ನಿರ್ದೇಶಕ ಮಂಡಳಿಯಿಂದ ಅಧಿಕರಿಸಲ್ಪಟ್ಟಿರತಕ್ಕದ್ದು ಮತ್ತು ಅರ್ಜಿಯನ್ನು ನಮೂನೆ-ಸಿಎಲ್-1ಎ ರಲ್ಲಿ ಮತ್ತು ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು, 1968ರ ನಿಯಮ 4( ಘೋಷಣೆಯನ್ವಯ ಸಲ್ಲಿಸತಕ್ಕದ್ದು.<br><br>3. ಈ ರೀತಿಯಾಗಿ ಅಧೀಕರಿಸಲ್ಪಟ್ಟ ವ್ಯಕ್ತಿಯು ಸನ್ನದಿಗಾಗಿ ಅರ್ಜಿಯನು ಸಕ್ಷಮ ಪ್ರಾಧಿಕಾರಿಯಾದ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು. |
| ಆ) | ಪ್ರತಿ ವರ್ಷ ಎಷ್ಟು M.S.I.L ಹಾಗೂ ಇತರೆ ಮಳಿಗೆಗಳನ್ನು ತೆರೆಯಲು ಪರವಾನಗಿಗಳನ್ನು ನೀಡಲಾಗುತ್ತದೆ; (ಪರವಾನಗಿಯನ್ನು ನೀಡುವ ಪ್ರಕ್ರಿಯೆ ಬಗ್ಗೆ ಮಾಹಿತಿ ನೀಡುವುದು) | ರಾಜ್ಯದಲ್ಲಿ ಪ್ರತಿ ವರ್ಷ ಎಂ.ಎಸ್.ಐ.ಎಲ್ ಸಂಸ್ಥೆಯವರಿಗೆ ಇಂತಿಷ್ಟೇ ಸಿಎಲ್-11 ಸನ್ನದುಗಳನ್ನು ಮಂಜೂರು ಮಾಡಬೇಕೆಂಬ ನಿಯಮವಿರುವುದಿಲ್ಲ. ಆದೇಶ ಸಂಖ್ಯೆ:ಎಫ್‌ಡಿ 07 ಇಎಫ್‌ಎಲ್ 2008 ದಿನಾಂಕ:03/07/2009ರಲ್ಲಿ ಪ್ರ ತಾಲ್ಲೂಕಿಗೆ ಕನಿಷ್ಟ 2 ಸನ್ನದುಗಳಂತೆ 352 ಸನ್ನದುಗಳು, ಜಿಲ್ಲಾ ಕೇಂದ್ರಸ್ಥಾನಕ್ಕೆ ರಂತೆ 58 ಸನ್ನದುಗಳು ಹಾಗೂ ಎಂಎಸ್‌ಐಎಲ್ ಸಂಸ್ಥೆ ಪ್ರಾದೇಶಿಕ ಬೇಡಿ ಅಧ್ಯಯನ ಆಧರಿಸಿ ಕೋರಿಕೆ ಸಲ್ಲಿಸುವ ಸ್ಥಳಗಳಿಗೆ 53 ಸನ್ನದುಗಳಂತೆ ಒಟ್ಟು 46 ಸನ್ನದುಗಳನ್ನು ಹಂಚಿಕೆ ಮಾಡಲಾಗಿದ್ದು, ಈ ಪೈಕಿ 434 ಸನ್ನದುಗಳಿ ಪೂರ್ವಾನುಮತಿ ನೀಡಲಾಗಿರುತ್ತದೆ. ಇನ್ನೂ 29 ಸನ್ನದುಗಳ ಕೋಟಾ ಬಾ ಇರುತ್ತದೆ.<br><br>ಮುಂದುವರೆದು, ಆದೇಶ ಸಂಖ್ಯೆ:ಎಫ್‌ಡಿ 15 ಇಎಫ್‌ಎಲ್ 2015 ದಿ:23-09 2016ರಲ್ಲಿ ರಾಜ್ಯದ 220 ವಿಧಾನ ಸಭಾ ಕ್ಷೇತ್ರಗಳಿಗೆ ಪ್ರತಿ ಕ್ಷೇತ್ರಕ್ಕೆ 4 ಸನ್ನದುಗಳಂ ಒಟ್ಟು 880, ಯಾದಗಿರಿ ಜಿಲ್ಲೆಯ ನಾಲ್ಕೂ ವಿಧಾನ ಸಭಾ ಕ್ಷೇತ್ರಗಳಿಗೆ ತಲಾ 5ರಂ ಒಟ್ಟು 20, ಹೀಗೆ ರಾಜ್ಯದಲ್ಲಿ ಒಟ್ಟಾರೆ 900 ಸಿಎಲ್-11ಸಿ ರಲ್ಲಿ 900 ಸಿಎಲ್ 11(ಸಿ) ಸನ್ನದುಗಳನ್ನು ಹಂಚಿಕೆ ಮಾಡಲಾಗಿದ್ದು, ಈ ಪೈಕಿ 601 ಸನ್ನದುಗಳಿ ಪೂರ್ವಾನುಮತಿ ನೀಡಲಾಗಿರುತ್ತದೆ. ಇನ್ನೂ 299 ಸನ್ನದುಗಳ ಕೋಟಾ ಬಾ ಇರುತ್ತದೆ. ಜಿಲ್ಲಾವಾರು ವಿವರವನ್ನು **ಅನುಬಂಧ-1**ರಲ್ಲಿ ಇರಿಸಿದೆ.<br><br>ರಾಜ್ಯದಲ್ಲಿ 1992ನೇ ಸಾಲಿನಿಂದ ಸಿಎಲ್-2 ಹಾಗೂ ಸಿಎಲ್-9 ಸನ್ನದ ಹೊಸದಾಗಿ ಮಂಜೂರಾತಿ ನೀಡಲು ಸರ್ಕಾರವು ನಿರ್ಬಂಧಿಸಿದೆ. ಇ |

| | | |
|---|---|---|
| | | ಸನ್ನದುಗಳಾದ ಸಿಎಲ್-4, ಸಿಎಲ್-6ಎ, ಸಿಎಲ್-7, ಸಿಎಲ್-7ಎ, ಸಿಎಲ್-8, ಸಿಎಲ್-8ಬಿ, ಇತರೆ ಸನ್ನದುಗಳಿಗೆ ಹೊಂದಿಕೊಂಡಂತೆ (ಸಿಎಲ್-4, ಸಿಎಲ್-7, ಸಿಎಲ್-9 ಮತ್ತು ಸಿಎಲ್-6ಎ) ಆರ್.ವಿ.ಬಿ, ವೈನ್ ಟ್ಯಾವರಿನ್/ವೈನ್ ಬೋಟಿಕ್ ಅಬಕಾರಿ ಸನ್ನದುಗಳನ್ನು ಹೊಸದಾಗಿ ನೀಡಲಾಗುತ್ತಿದೆ.<br><br>ಮೇಲಿನ ಉಪ ಪ್ರಶ್ನೆ (ಅ)ರಲ್ಲಿ ವಿವರಿಸಿರುವ ಕರ್ನಾಟಕ ಅಬಕಾರಿ ಕಾಯ್ದೆ 1965 ಮತ್ತು ಅದರಡಿ ರೂಪಿಸಲಾದ ನಿಯಮಗಳಡಿ ಪರಿಶೀಲಿಸಿ ಸನ್ನದುಗಳನ್ನು ಮಂಜೂರು ಮಾಡಲಾಗುತ್ತಿದೆ.<br><br>ರಾಜ್ಯಾದ್ಯಂತ ಕಳೆದ ಮೂರು ವರ್ಷಗಳಲ್ಲಿ ಹೊಸದಾಗಿ ಮಂಜೂರು ಮಾಡಿರುವ ಸನ್ನದುಗಳ ವಿವರಗಳನ್ನು **ಅನುಬಂಧ-2**ರಲ್ಲಿ ಇರಿಸಿದೆ. |
| ಇ) | M.S.I.L ಮಳಿಗೆಗಳನ್ನು ಹೊರತುಪಡಿಸಿ ಉಳಿದ ಮಳಿಗೆಗಳ ಮಾರಾಟಗಾರರು ಒಂದೇ ಪರವಾನಗಿಯ ಅಡಿಯಲ್ಲಿ ಬೇರೆ ಬೇರೆ ಸ್ಥಳಗಳಲ್ಲಿ ಮದ್ಯ ಮಾರಾಟ ಮಾಡಿ, ಸರ್ಕಾರದ ಬೊಕ್ಕಸಕ್ಕೆ ನಷ್ಟವನ್ನುಂಟು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅಂತಹವರ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಬಂದಿದೆ.<br><br>ಒಂದೇ ಪರವಾನಗಿಯ ಅಡಿಯಲ್ಲಿ ಬೇರೆ ಬೇರೆ ಸ್ಥಳಗಳಲ್ಲಿ ಮದ್ಯ ವಹಿವಾಟನ್ನು ನಡೆಸಲು ಇಲಾಖೆಯು ಯಾವುದೇ ಕಾರಣಕ್ಕೂ ಆಸ್ಪದ ನೀಡುವುದಿಲ್ಲ. ಆದಾಗ್ಯೂ ಬಿ.ಎಸ್. ಅನಿಲ್ ಕುಮಾರ್ ಇವರು ನಂ,4 & 4ಎ ಖಾತಾ ನಂ.1567 ಹೆಸರಘಟ್ಟ ಮುಖ್ಯ ರಸ್ತೆ, ಚಿಕ್ಕಸಂದ್ರ ವಿಲೇಜ್ ಬೆಂಗಳೂರು (ಅಂದಿನ ಟಿ ದಾಸರಹಳ್ಳಿ ವಲಯ) ಇಲ್ಲಿ 2016-17ನೇ ಸಾಲಿಗೆ ಹೊಂದಿದ್ದ ಸಿಎಲ್-9 ಸನ್ನದನ್ನು ಕಟ್ಟಡ ಸಂಖ್ಯೆ ನಂ.2574, 8ನೇ ಕ್ರಾಸ್, 13ನೇ ಮುಖ್ಯ ರಸ್ತೆ, ಇ ಬ್ಲಾಕ್, ಸಹಕಾರನಗರ ಬೆಂಗಳೂರು-92 ಇಲ್ಲಿ ಸ್ಥಳಾಂತರಗೊಳಿಸಲಾಗಿರುತ್ತದೆ. ಸ್ಥಳಾಂತರಗೊಂಡಿದ್ದ ಸ್ಥಳದಲ್ಲಿ ಈ ಮೊದಲು ಶ್ರೀಮತಿ ಮಂಜುಳ ಇವರು 2015-16ನೇ ಸಾಲಿಗೆ ಸಿಎಲ್-9 ಹಾಗೂ ಅದಕ್ಕೆ ಹೊಂದಿಕೊಂಡಂತೆ ಆರ್‌ವಿಬಿ ಸನ್ನದನ್ನು ಹೊಂದಿ ವಹಿವಾಟು ನಡೆಸುತ್ತಿದ್ದು, ಸದರಿ ಸನ್ನದು ಕಟ್ಟಡ ಸಂಖ್ಯೆ:307, 2ನೇ ಮಹಡಿ ಕೆ.ಪಿ. ಸ್ಕ್ವೇರ್, 100 ಅಡಿ ರಸ್ತೆ, ಇಂದಿರಾನಗರ, ಬೆಂಗಳೂರು ಇಲ್ಲಿಗೆ ಸ್ಥಳಾಂತರಗೊಂಡಿರುತ್ತದೆ. ಶ್ರೀಮತಿ ಮಂಜುಳ ಇವರಿಗೆ ಸೇರಿದ ಸದರಿ ಸನ್ನದು ಸ್ಥಳಾಂತರಗೊಂಡ ನಂತರವೂ ಸಹ ಅದೇ ಸ್ಥಳಕ್ಕೆ ಸ್ಥಳಾಂತರಗೊಂಡು ಬಂದ ಶ್ರೀ ಅನಿಲ್‌ಕುಮಾರ್ ಬಿ.ಎಸ್. ಇವರಿಗೆ ಸೇರಿದ ಸನ್ನದಿನ ಆವರಣದಲ್ಲಿ ಒಟ್ಟು 5.480 ಲೀಟರ್ ಮದ್ಯ ಹಾಗೂ 147.060 ಲೀಟರ್ ಬಿಯರ್ ದಾಸ್ತಾನನ್ನು ಯಾವುದೇ ರಹದಾರಿ ವಗೈರೆಗಳು ಇಲ್ಲದೇ ಹೊಂದಿರುವುದು ಪತ್ತೆಯಾಗಿದ್ದು, ಈ ಬಗ್ಗೆ ಪ್ರಕರಣ ದಾಖಲಿಸಲಾಗಿದ್ದು, ಅನಧಿಕೃತ ವೆಂಡರ್‌ಗಳು ಹಾಗೂ ಸನ್ನದುದಾರರಾದ ಬಿ.ಎಸ್. ಅನಿಲ್ ಕುಮಾರ್ ಇವರುಗಳ ವಿರುದ್ದ ಆರೋಪ ಪಟ್ಟಿ ಸಲ್ಲಿಸಲಾಗಿರುತ್ತದೆ. ಈ ಪ್ರಕರಣವು ಸಿಸಿ ಸಂಖ್ಯೆ:10193/2017 ರಂತೆ ಘನ ಸಿಎಂಎಂ ನ್ಯಾಯಾಲಯದಲ್ಲಿ ವಿಚಾರಣೆಗೊಂಡು ದಿನಾಂಕ:27-01-2021ರಲ್ಲಿ ಖುಲಾಸೆಯಲ್ಲಿ ಮುಕ್ತಾಯಗೊಂಡಿರುತ್ತದೆ. ಮುಂದುವರೆದು, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು, ಸಿಎಂಎಂ |

| | | |
|---|---|---|
| | | ನ್ಯಾಯಾಲಯ ಇವರು ದಿನಾಂಕ:11-02-2021 ರಂದು ಮಾನ್ಯ ಕಾನೂನು ಅಧಿಕಾರಿಗಳು (ಹಿರಿಯ) ಬೆಂಗಳೂರು ನಗರ ವಿಭಾಗ, ಬೆಂಗಳೂರು ರವರಿಗೆ ಬರೆದ ಪತ್ರದಲ್ಲಿ ಮಾನ್ಯ ನ್ಯಾಯಾಲಯ ತೀರ್ಪು ಸಮಂಜಸ ಮತ್ತು ಕಾನೂನು ಸಮ್ಮತವಿದ್ದು, ಪ್ರಕರಣವು ಮೇಲ್ಮನವಿಗೆ ಯೋಗ್ಯವಾಗಿರುವುದಿಲ್ಲವೆಂದು ವರದಿಸಿರುತ್ತಾರೆ.<br>ಒಂದು ಪರವಾನಗಿ ಪಡೆದ ಉದ್ದಿಮೆದಾರರು ಅದೇ ಪರವಾನಗಿಯಡಿಯಲ್ಲಿ ಜಿಲ್ಲೆಯ ಬೇರೆ ಬೇರೆ ಜಾಗಗಳಲ್ಲಿ ಮದ್ಯದಂಗಡಿ ಮತ್ತು ಬಾರ್ ಅಂಡ್ ರೆಸ್ಟೋರೆಂಟ್ ನಡೆಸಲು ಅವಕಾಶ ಮಾಡಿಕೊಟ್ಟಿರುವ ಅಧಿಕಾರಿಗಳ ವಿರುದ್ಧ ತೆಗೆದುಕೊಂಡ ಕ್ರಮದ ವಿವರವನ್ನು **ಅನುಬಂಧ-3**ರಲ್ಲಿ ಇರಿಸಿದೆ. |

ಆಇ 125 ಇಎಲ್‌ಕ್ಯೂ 2021

(ಕೆ. ಗೋಪಾಲಯ್ಯ)
ಅಬಕಾರಿ ಸಚಿವರು

ಅನುಬಂಧ-01

| ಕ್ರ.ಸಂ | ಜಿಲ್ಲೆ | ಸರ್ಕಾರಿ ಪತ್ರ ಸಂಖ್ಯೆ:ಎಫ್‌ಡಿ/07/ಇಎಫ್‌ಎಲ್/2008 ದಿನಾಂಕ: 03-07-2009 ರ ಆದೇಶದಂತೆ ಎಂಎಸ್‌ಐಎಲ್ ಸಂಸ್ಥೆಯವರಿಗೆ 463 ಕೋಟಾ ವಿವರ | | | ಸರ್ಕಾರಿ ಪತ್ರ ಸಂಖ್ಯೆ:ಎಫ್‌ಡಿ/15/ಇಎಫ್‌ಎಲ್/2015 ದಿನಾಂಕ:23-09-2016 ರ ಆದೇಶದಂತೆ ಎಂಎಸ್‌ಐಎಲ್ ಸಂಸ್ಥೆಯವರಿಗೆ 900 ಕೋಟಾ ವಿವರ | | | ಜಿಲ್ಲೆಯ ಒಟ್ಟು (4+7) |
|---|---|---|---|---|---|---|---|---|
| | | ಹಂಚಿಕೆ | ಪೂರ್ವಾನುಮತಿ ನೀಡಿರುವ ಸನ್ನದುಗಳ ಸಂಖ್ಯೆ | ಬಾಕಿ | ಹಂಚಿಕೆ | ಪೂರ್ವಾನುಮತಿ ನೀಡಿರುವ ಸನ್ನದುಗಳ ಸಂಖ್ಯೆ | ಬಾಕಿ | |
| 1 | 2 | 3 | 4 | 5 | 6 | 7 | 8 | 9 |
| 1 | ಬಾಗಲಕೋಟೆ | 16 | 16 | 0 | 28 | 28 | 0 | 44 |
| 2 | ಬೆಂಗಳೂರು ಗ್ರಾಮಾಂತರ ಜಿಲ್ಲೆ | 8 | 8 | 0 | 15 | 8 | 7 | 16 |
| 3 | ಬೆಂಗಳೂರು ನಗರ ಜಿಲ್ಲೆ - 1 | 24 | 24 | 0 | 112 | 52 | 60 | 76 |
| 4 | ಬೆಂಗಳೂರು ನಗರ ಜಿಲ್ಲೆ - 2 | | | | | | | |
| 5 | ಬೆಂಗಳೂರು ನಗರ ಜಿಲ್ಲೆ - 3 | | | | | | | |
| 6 | ಬೆಂಗಳೂರು ನಗರ ಜಿಲ್ಲೆ - 4 | | | | | | | |
| 7 | ಬೆಂಗಳೂರು ನಗರ ಜಿಲ್ಲೆ - 5 | | | | | | | |
| 8 | ಬೆಂಗಳೂರು ನಗರ ಜಿಲ್ಲೆ - 6 | | | | | | | |
| 9 | ಬೆಂಗಳೂರು ನಗರ ಜಿಲ್ಲೆ - 7 | | | | | | | |
| 10 | ಬೆಂಗಳೂರು ನಗರ ಜಿಲ್ಲೆ - 8 | | | | | | | |
| 11 | ಬೆಳಗಾವಿ ಉತ್ತರ | 33 | 28 | 5 | 72 | 28 | 19 | 81 |
| 12 | ಬೆಳಗಾವಿ ದಕ್ಷಿಣ | | | | | 25 | | |
| 13 | ಬಳ್ಳಾರಿ | 18 | 18 | 0 | 36 | 27 | 9 | 45 |
| 14 | ಬೀದರ್ | 13 | 12 | 1 | 24 | 21 | 3 | 33 |
| 15 | ಬಿಜಾಪುರ್ | 12 | 12 | 0 | 32 | 28 | 4 | 40 |
| 16 | ಚಾಮರಾಜನಗರ | 10 | 10 | 0 | 16 | 4 | 12 | 14 |
| 17 | ಚಿಕ್ಕಬಳ್ಳಾಪುರ | 14 | 14 | 0 | 20 | 17 | 3 | 31 |
| 18 | ಚಿಕ್ಕಮಗಳೂರು | 23 | 18 | 5 | 20 | 15 | 5 | 33 |
| 19 | ಚಿತ್ರದುರ್ಗ | 15 | 15 | 0 | 24 | 18 | 6 | 33 |
| 20 | ದಕ್ಷಿಣ ಕನ್ನಡ | 14 | 11 | 3 | 32 | 18 | 14 | 29 |
| 21 | ದಾವಣಗೆರೆ | 12 | 12 | 0 | 32 | 28 | 4 | [illegible] |
| 22 | ಧಾರವಾಡ | 12 | 12 | 0 | 28 | 22 | 6 | 34 |
| 23 | ಗದಗ್ | 12 | 11 | 1 | 16 | 5 | 11 | 16 |
| 24 | ಗುಲ್ಬರ್ಗ | 18 | 17 | 1 | 36 | 30 | 6 | [illegible] |
| 25 | ಹಾಸನ್ | 20 | 20 | 0 | 28 | 18 | 10 | 38 |
| 26 | ಹಾವೇರಿ | 16 | 16 | 0 | 24 | 18 | 6 | 34 |
| 27 | ಕೊಡಗು | 8 | 8 | 0 | 8 | 5 | 3 | 13 |
| 28 | ಕೋಲಾರ | 12 | 12 | 0 | 24 | 10 | 14 | 22 |
| 29 | ಕೊಪ್ಪಳ | 10 | 10 | 0 | 20 | 15 | 5 | 25 |
| 30 | ಮಂಡ್ಯ | 17 | 16 | 1 | 28 | 24 | 4 | 40 |
| 31 | ಮೈಸೂರು ನಗರ | 17 | 16 | 1 | 44 | 6 | 22 | 38 |
| 32 | ಮೈಸೂರು ಗ್ರಾಮಾಂತರ | | | | | 16 | | |
| 33 | ರಾಯಚೂರು | 14 | 12 | 2 | 28 | 22 | 6 | 34 |
| 34 | ರಾಮನಗರ | 10 | 10 | 0 | 17 | 8 | 9 | 18 |
| 35 | ಶಿವಮೊಗ್ಗ | 22 | 18 | 4 | 28 | 23 | 5 | 41 |
| 36 | ತುಮಕೂರು | 23 | 23 | 0 | 44 | 36 | 8 | 59 |
| 37 | ಉಡುಪಿ | 8 | 8 | 0 | 20 | 7 | 13 | 15 |
| 38 | ಉತ್ತರ ಕನ್ನಡ | 21 | 19 | 2 | 24 | 6 | 18 | 25 |
| 39 | ಯಾದಗಿರಿ | 8 | 8 | 0 | 20 | 13 | 7 | 21 |
| ಹಂಚಿಕೆ ಮಾಡಲು ಬಾಕಿ | | 3 | | 3 | | | | |
| ಒಟ್ಟು | | **463** | **434** | **29** | **900** | **601** | **299** | **1035** |

ಆಇ 125 ಇಎಲ್‌ಕ್ಯೂ 2021

## ಅನುಬಂಧ-3

| ಕ್ರ ಸಂ. | ಕಡತ ಸಂಖ್ಯೆ | ಅಧಿಕಾರಿ / ನೌಕರರ ಹೆಸರು ಪದನಾಮ ಶ್ರೀಯುತ/ಶ್ರೀಮತಿ | ವಿಷಯ | ಜರುಗಿಸಲಾದ ಕ್ರಮ |
|---|---|---|---|---|
| 1) | ಇಸಿಇ/14/ಸಿಆರ್‌ಎಂ/ ಬೆಂ(ಪೂ)/2017-18/ ಡಿಎಸ್‌ಸಿ(1) | 1. ಶ್ರೀಮತಿ ಶೈಲಜಾ ಎ. ಕೋಟೆ, ಅಬಕಾರಿ ಉಪ ಆಯುಕ್ತರು<br>2. ಶ್ರೀ ಜೆ. ಗಿರಿ, ಅಬಕಾರಿ ಉಪ ಆಯುಕ್ತರು<br>3. ಶ್ರೀ ಪಿ. ಚಂದ್ರು, ಅಬಕಾರಿ ಉಪ ಅಧೀಕ್ಷಕರು<br>4. ಶ್ರೀಮತಿ ಕವಿತಾ ಕೆ. ಅಬಕಾರಿ ನಿರೀಕ್ಷಕರು<br>5. ಶ್ರೀಮತಿ ಗೀತಾ ಡಿ. ಅಬಕಾರಿ ನಿರೀಕ್ಷಕರು | ಬೆಂಗಳೂರು ನಗರ (ಪೂರ್ವ) ಜಿಲ್ಲೆಯ ರಾಜಮಹಲ್ ವಿಲಾಸ ವಲಯ ವ್ಯಾಪ್ತಿಯ ಸಹಕಾರ ನಗರದಲ್ಲಿರುವ ಮೆ: ನೇಸರ ಗ್ರಾಂಡ್ ಬಾರ್ ಅಂಡ್ ರೆಸ್ಟೋರೆಂಟ್ ಎಂಬ ಹೆಸರಿನ ಸಿ.ಎಲ್-9 ಸನ್ನದು ಎರಡೂ ವಲಯ ವ್ಯಾಪ್ತಿಗಳಲ್ಲಿ ಕಾರ್ಯ ನಿರ್ವಹಿಸಲು ಕಾರಣರಾದ ಅಧಿಕಾರಿ/ನೌಕರರ ವಿರುದ್ಧ ಶಿಸ್ತು ಕ್ರಮದ ಕುರಿತು. | ಕ್ರ.ಸಂ. 3 ರಿಂದ 5 ರ ವರೆಗಿನ ಗ್ರೂಪ್-ಬಿ ಮತ್ತು ಗ್ರೂಪ್ ಸಿ ಸಿಬ್ಬಂದಿಗಳ ವಿರುದ್ಧ ವಿಚಾರಣೆ ನಡೆಸಲು ಶಿಸ್ತು ಪ್ರಾಧಿಕಾರಿಯಾದ ಅಬಕಾರಿ ಆಯುಕ್ತರು ವಿಚಾರಣೆಗೆ ಆದೇಶಿಸಿದ್ದು, ವಿಚಾರಣಾ ವರದಿಯು ಸ್ವೀಕೃತವಾಗಿದ್ದು, ಪರಿಶೀಲಿನಾ ಹಂತದಲ್ಲಿದೆ.<br>ಕ್ರ.ಸಂ.1 ಮತ್ತು 2ರಲ್ಲಿರುವ ಗ್ರೂಪ್-ಎ ವೃಂದದ ಅಧಿಕಾರಿಗಳ ವಿರುದ್ಧ ವಿಚಾರಣೆ ನಡೆಸಲು ದಿನಾಂಕ: 20.03.2020ರ ಆದೇಶಿಸಲಾಗಿದ್ದು, ಇಲಾಖಾ ವಿಚಾರಣೆ ಚಾಲ್ತಿಯಲ್ಲಿದ್ದು, ವಿಚಾರಣಾ ವರದಿಯನ್ನು ನಿರೀಕ್ಷಿಸಲಾಗುತ್ತಿದೆ. |